# 4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತುಮಕೂರು-ಮಧುಗಿರಿ

**ಎಸ್.ಸಿ.ಸಂಖ್ಯೆ** 5028/2024 ಫ್ರಾಸಾ-10

ಚಾಸಾ-16

ದಿನಾಂಕಃ 01-07-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

| | |
|---|---|
| **ಹೆಸರು** | ಕೆ. ಈರಣ್ಣ |
| **ತಂದೆಯ / ಗಂಡನ ಹೆಸರು** | ಲೇಟ್ ಒಬಪ್ಪ |
| **ವಯಸ್ಸು** | 78 |
| **ಉದ್ಯೋಗ** | ಅರ್ಜಿ ಬರೆಯುವುದು |
| **ವಾಸಸ್ಥಳ** | ಗುಟ್ಟಹಳ್ಳಿ |

**ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದ ಃ-**

ನನಗೆ ಯಾರಾದರೂ ಕರೆದರೆ ಹೋಗಿ ಅರ್ಜಿ ಬರೆದುಕೊಡುತ್ತೇನೆ. ದಿ.04.04.2024 ರಂದು ಸಪ್ಲಮ್ಮ ದೇವಸ್ಥಾನ ಹತ್ತಿರ ನಾನು ಕೂತಿದ್ದಾಗ ಚಾಸಾ-1 ಮತ್ತು ಇತರರು ಬಂದು ನಮಗೆ ಕನ್ನಡ ಬರೆಯಲು ಬರುವುದಿಲ್ಲ ದೂರು ಬರೆದುಕೊಡಿ ಎಂದು ತೆಲುಗಿನಲ್ಲಿ ಹೇಳಿರುತ್ತಾರೆ ನನಗೆ ಕನ್ನಡ , ತೆಲುಗು ಎರಡು ಭಾಷೆ ಬರುತ್ತದೆ , ನಾನು ಪಿ.ಯು.ಸಿ ವರೆಗೆ ಓದಿರುತ್ತೇನೆ. ರಂಗಮ್ಮ ಹೇಳಿದಂತೆ ನಾನು ಪಿರ್ಯಾದಿ ತಯಾರು ಮಾಡಿಕೊಟ್ಟಿರುತ್ತೇನೆ. ರಂಗಮ್ಮ ನನ್ನ ಸಮಕ್ಷಮ ಆರೋಪಿ ತನ್ನ ಮಗಳು ರತ್ನಮ್ಮಳೊಂದಿಗೆ ಆಗಾಗ ಗಲಾಟೆ ಆಗುತ್ತಿತ್ತು, ದಿ. 04.04.2024 ರಂದು ಆರೋಪಿ ರತ್ನಮ್ಮಳಿಗೆ ನೀನು ನೇಣು ಹಾಕಿಕೊಂಡು ಸತ್ತರೆ ನನಗೆ ನೆಮ್ಮದಿ ಸಿಗುತ್ತದೆ ಎಂದು ಅವಳ ಜೊತೆ ಗಲಾಟೆ ಮಾಡಿದ್ದರಿಂದ ರತ್ನಮ್ಮ ಸೀರೆಯಿಂದ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿರುತ್ತಾಳೆ ಈ ವಿಷಯವನುನ ತನ್ನ ಮೊಮ್ಮಕ್ಕಳು ತನಗೆ ತಿಳಿಸಿರುತ್ತಾರೆಂದು ನನಗೆ ಹೇಳಿದ್ದು ನಾನು ಅವರಿಂದ ವಿವರವಾಗಿ ತಿಳಿದುಕೊಂಡು ನಿಪಿ-1 ರಂತೆ ಪಿರ್ಯಾದಿ ಬರೆದಿರುತ್ತೇನೆ.

ನಿಪಿ-1 ರ ಮೇಲೆ ನನ್ನ ಸಹಿ ಇದೆ ಅದನ್ನು ಗುರುತಿಸುತ್ತೇನೆ ಸಾಕ್ಷಿ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ನಿಪಿ-1 ರಲ್ಲಿರುವ ಬರವಣಿಗೆ ನನ್ನ ಕೈ ಬರಹ ಇರುತ್ತದೆ. ಆರೋಪಿ ಆಗಾಗ ಕುಡಿಯುತ್ತಾನೆಂದು ರತ್ನಮ್ಮ ಹೇಳಿರುತ್ತಾಳೆ.

**ಪಾಟೀಸವಾಲು ಶ್ರೀ. ಪಿ.ಎನ್.ಆರ್. ವಕೀಲರಿಂದ ಆರೋಪಿ ಪರವಾಗಿಃ-**

ಪಿರ್ಯಾದಿ ಬರೆದಾಗ ಸಮಯ ಎಷ್ಟು ಆಗಿತ್ತು ಎಂದು ನನಗೆ ಗೊತ್ತಿಲ್ಲ. ದಿ.04.04.2024 ರಂದು ನಾನು ಪಿರ್ಯಾದಿಯನ್ನು ಬರೆದಿರುತ್ತೇನೆ. ರಂಗಮ್ಮ ರವರಿಗೆ ಎಷ್ಟು ವಯಸ್ಸಾಗಿತ್ತು ಎಂದು ನಾನು ವಿಚಾರ ಮಾಡಿರುವುದಿಲ್ಲ. ರಂಗಮ್ಮನ ಜೊತೆ ಒಬ್ಬ ಮೊಮ್ಮಗನನ್ನು ಮತ್ತು ಇತರರು ಸಪ್ಲಮ್ಮ ದೇವಸ್ಥಾನದ ಹತ್ತಿರ ಬಂದಿದ್ದರು. ನಾನು ಸಾಮಾನ್ಯವಾಗಿ ನನ್ನ ಬಳಿ ಬಂದು ಕೇಳಿದವರಿಗೆ ಪಿರ್ಯಾದಿ ಬರೆದುಕೊಡುತ್ತೇನೆ. ದಿ.04.04.2024 ರಂದು ಕೃತ್ಯ ನಡೆದಿರುತ್ತದೆ ಅದೇ ದಿನ ನಾನು ಪಿರ್ಯಾದಿ ಬರೆದಿರುತ್ತೇನೆ. ಆ ದಿನ ರಂಗಮ್ಮ ಸಾಯಂಕಾಲ 4-00 ರಿಂದ 4-30 ಗಂಟೆಗೆ ಸಪ್ಲಮ್ಮ ದೇವಸ್ಥಾನದ ಹತ್ತಿರ ನನ್ನ ಬಳಿ ಬಂದಿದ್ದಳು. ನಾನು ಪಿರ್ಯಾದಿಯಲ್ಲಿ ಅವರ ಹೇಳಿಕೆಯಂತೆ ನನ್ನ ಕೈ ಬರಹದಲ್ಲಿ ಬರೆದಿರುತ್ತೇನೆಂದು ಬರೆದಿರುತ್ತೇನೆ. ರಂಗಮ್ಮ ರವರ ಗುರುತಿನ ಬಗ್ಗೆ ಯಾವುದೇ ದಾಖಲೆಯನ್ನು ಪಡೆದುಕೊಂಡು ನೋಡಿರುವುದಿಲ್ಲ. ರಂಗಮ್ಮ ನನಗೆ ತನ್ನ ಆಳಿಯ ಈರಣ್ಣ , ಮಗಳು ರತ್ನಮ್ಮ ಎಂದು ಹೇಳಿರುತ್ತಾಳೆ. ರಂಗಮ್ಮ ರವರು ನನ್ನ ಬಳಿ ಬಂದಿರಲಿಲ್ಲ ಯಾವುದೇ ರೀತಿಯ ಮಾಹಿತಿ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ರಂಗಮ್ಮ ರವರು ಯಾವ ಭಾಷೆಯಲ್ಲಿ ಹಾಕಿದ್ದಾರೆಂದು ನನಗೆ ಹೇಳಲು ಆಗುವುದಿಲ್ಲ. ರಂಗಮ್ಮ ಸಹಿ ಹಾಕಿರುವುದನ್ನು ನಾನು ಗಮನಿಸಿರುತ್ತೇನೆ.

**ಮರುವಿಚಾರಣೆ ಇಲ್ಲ.**

(ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಒ ತಿ ಹೇ ಸ ಇದೆ.**

**4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ತುಮಕೂರು-ಮಧುಗಿರಿ.**